**ದಿನಾಂಕಃ 12.12.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು :- ಶ್ರೀ. ಜಿ.ಹೆಚ್.ಎಂ. ವಕೀಲರಿಂದ ಆರೋಪಿಗಳ ಪರವಾಗಿ:-**

ನೀವು ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2ರಲ್ಲಿ ಇರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-2ನ್ನು ಎಲ್ಲಿ ಯಾವ ದಿನಾಂಕದಂದು ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಯಾವ ದಿನಾಂಕ ಗೊತ್ತಿಲ್ಲ, ಅಪಘಾತವಾದ ಮಾರನೇ ದಿನ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತ ಯಾವ ದಿನ ಆಗಿರುತ್ತದೆ ಎಂದರೆ ಸಾಕ್ಷಿಯು ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರ್ ಗೆ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯ ಬೈನಗೆರೆ ರಸ್ತೆ ಊರ್ಟನ್ ಬಳಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ಪೋಲೀಸರು ನೋಟೀಸ್ ನೀಡಿರುತ್ತಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಪಘಾತಕ್ಕೆ ಒಳಗಾದ ಹಾಗೂ ಅಪಘಾತ ಪಡಿಸಿದ ವಾಹನಗಳ ಸಂಖ್ಯೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಬೈಕ್ ಸಂಖ್ಯೆ ಕೆಎ-42-ಆರ್-9762 ಹಾಗೂ ಕೆಎ-51-ಎಂ.ಬಿ-8347 ಕಾರು ಎಂದು ನುಡಿಯುತ್ತಾರೆ.ಸಾಕ್ಷಿಯು ಅಪಘಾತಕ್ಕೆ ಒಳಗಾದ ಹಾಗೂ ಅಪಘಾತ ಪಡಿಸಿದ ವಾಹನಗಳ ಸಂಖ್ಯೆಗಳನ್ನು ಕೈಯಲ್ಲಿ ಬರೆದುಕೊಂಡು ಬಂದು ಉತ್ತರ ನೀಡಿರುತ್ತಾರೆ. ಘಟನೆಯನ್ನು ನೀವು ಕಣ್ಣಾರೆ ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿದ್ದೇನೆ ಎಂದು ನುಡಿಯುತ್ತಾರೆ. ನೀವು ಘಟನೆ ನೋಡಿರುತ್ತೇನೆ ಎಂದು ಪೋಲೀಸರಿಗೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ಮಹಜರ್ ಸ್ಥಳಕ್ಕೆ ಎಷ್ಟು ಗಂಟೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಸಂಜೆ 4.00 ಗಂಟೆಗೆ ಎಂದು ನುಡಿಯುತ್ತಾರೆ. ಮಹಜರ್ ಸ್ಥಳಕ್ಕೆ ಯಾರು ಯಾರು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಪೋಲೀಸರು, ಚಾಸಾ-1 ಮತ್ತು 8 ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮನ್ನು ಹೊರತುಪಡಿಸಿ ಅಪಘಾತ ಸ್ಥಳದಲ್ಲಿ ಇನ್ನೂ ಬೇರೆ ಜನ ಇದ್ದರಾ ಎಂದರೆ ಸಾಕ್ಷಿಯು ಇದ್ದರು ಎಂದು ನುಡಿಯುತ್ತಾರೆ. ಅವರುಗಳ ಹೆಸರುಗಳನ್ನು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿಯುತ್ತಾರೆ. ಮಹಜರ್ ಮಾಡಲು ಸ್ಥಳಕ್ಕೆ ಎಷ್ಟು ಜನ ಪೋಲೀಸ್ ಅಧಿಕಾರಿಗಳು ಬಂದಿದ್ದರು ಎಂದರೆ ಸಾಕ್ಷಿಯು 3-4 ಜನ ಬಂದಿದ್ದರು ಎಂದು ನುಡಿಯುತ್ತಾರೆ. ಮಹಜರ್ ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೂ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಮಾರು 3-4 ಗಂಟೆಯವರೆಗೂ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ಮಹಜರ್ ಸ್ಥಳದ ಚಕ್ಕುಬಂದಿ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಪೂರ್ವ-ಪಶ್ಚಿಮ ಬೆಂಗಳೂರು ಮಂಗಳೂರು ರಸ್ತೆ, ಉತ್ತರಕ್ಕೆ ಬೈನಗೆರೆ ಗೆ ಹೋಗುವ ರಸ್ತೆ, ದಕ್ಷಿಣಕ್ಕೆ ಖಾಲಿ ಜಾಗ ಮತ್ತು ಹೋಟೇಲ್ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಅಪಘಾತಕ್ಕೆ ಒಳಗಾದ ವಾಹನಗಳು ಇದ್ದವಾ ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ ಸ್ಥಳದಲ್ಲಿ ಇದ್ದ ವಾಹನಗಳನ್ನು ನಿಮ್ಮ ಮುಂದೆ ತೆಗೆದುಕೊಂಡು ಹೋಗಿರುತ್ತಾರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದಿಂದ ದ್ವಿ ಚಕ್ರವಾಹನ ಎಲ್ಲಿ ಡ್ಯಾಮೇಜ್ ಆಗಿತ್ತು ಎಂದರೆ ಸಾಕ್ಷಿಯು ಬೈಕ್ ಬಲಭಾಗದಲ್ಲಿ ಡ್ಯಾಮೇಜ್ ಅಗಿರುತ್ತದೆ ಹಾಗೂ ಕಾರ್ ಬಲಭಾಗದಲ್ಲಿ ಡ್ಯಾಮೇಜ್ ಅಗಿರುತ್ತದೆ ಎಂದು ನುಡಿಯುತ್ತಾರೆ. ನೀವು ಹೇಳುವ ರೀತಿಯಲ್ಲಿ ಮಹಜರ್ ನಲ್ಲಿ ಬರೆದುಕೊಂಡಿದ್ದಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮೃತರಾಗಿರುವ ಹೆಸರು ಏನು ಎಂದರೆ ಸಾಕ್ಷಿಯು ಬೀಮಣ್ಣ ಎಂದು ನುಡಿಯುತ್ತಾರೆ. ಅವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2ಕ್ಕೆ ನಿಮ್ಮನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-8 ಮತ್ತು 9ರವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

4. ಚಾಸಾ-1 ಮತ್ತು 9 ರವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿಯ ಪರಿಚಯಸ್ಥರು ಎಂದು ನುಡಿಯುತ್ತಾರೆ. ನಿಮ್ಮ ಮುಂದೆ ಪೋಲೀಸರು ಯಾವುದೇ ಮಹಜರ್ ಅನುಸರಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಚಾಸಾ-1 ಮತ್ತು 9 ರವರು ನಿಮಗೆ ಪರಿಚಯಸ್ದರು ಹಾಗೂ ಮೃತ ವ್ಯಕ್ತಿಯ ಕುಟುಂಬಕ್ಕೆ ಸಹಾಯವಾಗಲೆಂದು ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**